(ಇಂದು ದಿನಾಂಕ:08-12-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ಶಂಕರರಾವ್ ನನಗೆ ಅವರ ತಂದೆಯ ಕಾಲದಿಂದಲೂ ಪರಿಚಯ. ಮೃತ ಕೆ ಸುಧೀರ ಪರಿಚಯ ಇಲ್ಲ. ಮೃತ ಕೆ ಸುಧೀರ ರವರನ್ನು ನಾನು ನೋಡಿಲ್ಲ. ಮೃತ ಕೆ ಸುಧೀರ ರವರ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. 2016 ನೇ ಸಾಲಿನಲ್ಲಿ ಹೊಲ ಖರೀದಿ ಬಗ್ಗೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸರ್ವೇ ನಂ. 66 ಕ್ಷೇತ್ರ 5 ಎಕರೆ 13 ಗುಂಟೆ ಇದರ ಬಗ್ಗೆ ಖರೀದಿ ಮಾತನಾಡಿದರು. ಖರೀದಿ ಮಾತುಕತೆಯನ್ನು ಕೊಳಬಾಳ ಗ್ರಾಮದ ಒಂದು ಕಟ್ಟೆಯ ಮೇಲೆ ಮಾಡಲಾಯಿತು. ಎಕರೆಗೆ ಎಷ್ಟು ಅಂತಾ ನನಗೆ ಗೊತ್ತಿಲ್ಲ. ಆದರೆ ಒಟ್ಟು ವಿಸ್ತೀರ್ಣದ ಬಗ್ಗೆ 2013 ರಲ್ಲಿ ಮಾತುಕತೆ ಆಯಿತು. ರೂ.24 ಲಕ್ಷಗಳಿಗೆ ಮಾತುಕತೆ ಆಗಿರುತ್ತದೆ. ಮಾತುಕತೆ ಆದ ದಿನ ಪತ್ರದ ಬರವಣಿಗೆ ಆಗಿಲ್ಲ. ನಾನು ಮಾತುಕತೆಯಲ್ಲಿ ಭಾಗಿಯಾಗಿದ್ದೆ, ನಂತರ ಏನಾಯಿತು ಗೊತ್ತಿಲ್ಲ. ನನ್ನ ಸಮಕ್ಷಮ ನಂತರದ ದಿನಗಳಲ್ಲಿ ಕೂಡಾ ಯಾವುದೇ ಪತ್ರ ಬರೆದಿಲ್ಲ. 2013 ರಲ್ಲಿ ನಾನು ಮಾತುಕತೆಯಲ್ಲಿ ಭಾಗಿ ಆಗಿದ್ದೇನೆ ಅಂತಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಆ ಬಗ್ಗೆ ಪ್ರಥಮವಾಗಿ ನ್ಯಾಯಾಲಯದಲ್ಲಿ ಇಂದೇ ಹೇಳುತ್ತಿದ್ದೇನೆ.

2. ಕೊಳಬಾಳದಲ್ಲಿ ಮಾತುಕತೆ ಆದ ವಿಷಯ ಮಾತ್ರ ನನಗೆ ಗೊತ್ತು. ಅದರ ನಂತರದ ಬೆಳವಣಿಗೆಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿನ ಅಂಶಗಳು ಬಹಳ ದಿನಗಳಾಗಿದ್ದರಿಂದ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು 2016 ರಲ್ಲಿ ಸಲ್ಲಿಸಿದ್ದೇನೆ. ಆದ ಕಾರಣ ನನಗೆ ಅದರಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ನೆನಪಿರುವುದಿಲ್ಲ. ಸಾಕ್ಷಿಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತೋರಿಸಲಾಗಿ 2016 ರಲ್ಲಿ ಅದನ್ನು ತಯಾರಿಸಲಾಗಿದೆ ಅಂತಾ ನುಡಿಯುತ್ತಾರೆ. ವ್ಯವಹಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲ.

ಶಂಕರರಾವ್ ಇವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು